ಎದುರು ತಾನೊಬ್ಬ ಛಾಯಾಚಿತ್ರಗಾರ ಎಂದು ತೋರಿಸಿಕೊಳ್ಳಲು ವೈದ್ಯ ಹವಣಿಸಿ ಸೋಲುತ್ತಿದ್ದ. ಆಸಕ್ತಿ ಮತ್ತು ಶ್ರದ್ಧೆಯಿಲ್ಲದೆ ಒಣ ಧಿಮಾಕು ಮುಂದು ಮಾಡಿ ಯಾವುದನ್ನೂ ಕಲಿಯಲಾಗದು. ಈ ಸ್ಪಷ್ಟತೆ ವೈದ್ಯನಿಗಿರಲಿಲ್ಲ. ಉಡಾಫೆಯಲ್ಲಿ ಫೊಟೋಗ್ರಫಿ ಗೆಲ್ಲಲು ಹೊರಟು ಮಗುವಿನಂತೆ ಸೋಲುತ್ತಿದ್ದ. ಇವನಿಗೆ ಕ್ಯಾಮೆರಾ ಕೊಡಿಸಿ ಉತ್ತೇಜಿಸಿದ ಕಿರಾತಕನ ಮೊದಲು ಹುಡುಕಿ ಹೊಡೆಯಬೇಕು ಎನ್ನುವಷ್ಟು ಇವನು ರೇಜಿಗೆ ಹುಟ್ಟಿಸಿದ್ದ. ಇಂತಹ ಚಿತ್ರವಿಚಿತ್ರ ಜನ ಫೊಟೋಗ್ರಫಿ ಪಯಣದಲ್ಲಿ ಬೇಡವೆಂದರೂ ಸಿಗುತ್ತಾರೆ.

ವೈದ್ಯನ ಹೆಂಡತಿಯ ಪರಿಚಯ ಸಂಪಾದಿಸಿ 'ಏನು ನಿಮ್ಮ ಗಂಡನ ಕಥೆ. ಯಾಕಿಂಗಾಡ್ತಾರೆ. ನೀವು ನೋಡಿ ಎಷ್ಟೊಂದು ತಾಳ್ಮೆಯಿಂದ ಇದ್ದೀರಿ. ತುಂಬಾ ಸೆನ್ಸಿಬಲ್ಲಾಗಿರೋ ನೀವು ಹೇಗೆ ಮ್ಯಾನೇಜ್ ಮಾಡ್ತೀರಿ' ಎಂದು ಬೆಂಕಿ ಹಚ್ಚುವ ಮನೆಹಾಳು ಪ್ರಶ್ನೆ ಎಸೆದು ನಿಂತೆ. ಆಕೆ ಫಳಫಳ ಕಣ್ಣೀರು ಹರಿಬಿಟ್ಟು 'ಅದೇನೋ ಉದ್ವೇಗ ಸ್ವಭಾವ ಅಂತೆ. ಮನಸ್ಸು ಶಾಂತ ಇರಲ್ಲ. ಸಿಡುಕು ಜಾತಿ. ಹ್ಯಾಬೀಟೂ ಕೆಟ್ಟಿಲ್ಲ. ಒಳ್ಳೆ ಮನಸ್ಸೈತೆ, ಮನುಷ್ಯ ಕೆಟ್ಟವನಲ್ಲ. ಒಂದೊಂದು ಸಲ ಹಿಂಗೆ ಲೂಸಾಗಿ ಆಡ್ತಾರೆ. ಏನಾದ್ರೂ ಬುದ್ಧಿ ಹೇಳೋಕೆ ಹೋದ್ರೆ ಮೈಮ್ಯಾಕೇ ಬರ್ತಾರೆ. ನಂಬಿಕೆ ಕಮ್ಮಿ. ಡಾಕ್ಟ್ರು, ನೋಡೋಕೆ ವೈನಾಗಿದಾನೆ. ಆಸ್ತಿ-ಅಡುವು, ಮನೆತನ, ನೋಡಿ ನಮ್ಮಪ್ಪ ಮದ್ವೆ ಮಾಡಿದ್ರು. ಈಗ ನೋಡಿ ಸಾರ್ ಓದೀದೀನಿ ಅನ್ನೋನೆ ಹಿಂಗಾಡ್ತಾನೆ. ಯಾರೂ ಹೆಣ್ಣು ಕೊಡೋದಿಲ್ಲ ಅನ್ನೋ ಹೊತ್ಗೆ ಕಮ್ಮಿ ಓದಿದ್ದ ನನ್ನ ಗಂಟು ಹಾಕಿದ್ದಾರೆ. ದೇವ್ರು- ದಿಂಡ್ರು, ಹರಕೆ ಎಲ್ಲಾ ಆದ್ವು. ಗಿಡ-ಮರ, ಪಕ್ಷಿ-ಪ್ರಾಣಿ, ಗಾಳಿ, ನೀರಿರೋ ತಾವಲ್ಲಿದ್ರೆ ಸುಧಾರಿಸ್ತಾನೆ ಅಂದ್ರು. ಏನ್ಮಾಡಾನ ಹೇಳ್ರಿ. ಇದರ ಸುಳಿಬೀಳಾ! ಎಲ್ಲೋದ್ರೂ ಕೊರಕೊರ ಎಬ್ಬಿ ಜಗಳ ತೆಗಿಯುತ್ತೆ. ವಾರದ ಹಿಂದೆ ರೈಲ್ವೆ ಸ್ಟೇಷನ್ನಲ್ಲೂ ಮಾತಿಗೆ ಮಾತಾಗಿ, ಹಿಡ್ಕೊಂಡು ಇಬ್ರು ಇಕ್ಕೇ ಬಿಟ್ರು. ಹುಚ್ಚಾಪಟ್ಟೆ ಅಂದ್ರೆ ಯಾರ್ ಸುಂಕಿರ್ತಾರೆ? ನಾನು ದೌಡ್‌ವೋಗಿ 'ಸ್ವಾ ಲೂಸು ಕಂಡ್ರಣ್ಣ. ಬಿಟ್ಬಿಡಿ' ಅಂತೇಳಿ ಬಚಾವು ಮಾಡಿ ಕರ್ಕೊಂಡ್ ಬಂದೆ. ಇವತ್ತು ನೀವು ಯಾರಾನ ರೋಸಿ ನಾಲ್ಕು ಬಿಗುದ್ರೆ ಹಂಗೇ ಎದ್ದು ಓಡೇ ಬರಾನಾಂತ ಕಾದ್ಕೊಂಡು ಕುಂತಿದ್ದೆ ಸರ್. ಇವನ ಕಾಯೋದೇ ರಗಳೆ. ಮಗೀನಂಗೆ ಮಾಡ್ತಾನೆ ಬೇಜಾರಾಗ್ತೇಡಿ' ಎಂದಳು ಹಳ್ಳಿಯ ನವವಧು. ಅವಳ ಕಷ್ಟದ ಕಥೆ ಕೇಳಿ ಸಿಟ್ಟು ಬಂದಿದ್ದ ವೈದ್ಯನ ಮೇಲೆ ಮಮಕಾರ ಮೂಡಿತು. ಅಣಕಿಸಿ ನಕ್ಕಿದ್ದು ತಪ್ಪೆಂದು ಅರಿವಾಯಿತು. ಇವನ ನಂಬಿ ಚಿಕಿತ್ಸೆ ಪಡೆಯಲು ಬಂದವರ ಗತಿ ಏನಾಗಬಹುದೆಂದು ಊಹಿಸಿಯೇ ಹೆದರಿಕೆಯಾಯಿತು.

ಮನಸ್ಸು ಶಾಂತಗೊಳ್ಳಲು ಹಕ್ಕಿ ವೀಕ್ಷಣೆ ಉತ್ತಮ

